ದೀವಟಿಗೆ

ವಾರಪತ್ರಿಕೆ, ಸಂಪಾದಕ: ಸಿರಿಮನೆ ನಾಗರಾಜ್

ಖಾಸಗಿ ಪ್ರಸಾರಕ್ಕಾಗಿ ಕೊಪ್ಪ ೧೧-೭-೮೨ ಭಾನುವಾರ .೨೩

ಚಳುವಳಿಯ ಹಾದಿಯಲ್ಲಿ ಕೊಪ್ಪದ ಕಿರಿಯ ಕಾಲೇಜು ವಿದ್ಯಾರ್ಥಿಗಳು

ಕೊಪ್ಪ: ವರ್ಷಗಟ್ಟಲೆಯಿಂದ ಎಷ್ಟೋ ವಿಷಯಗಳಲ್ಲಿ ಉಪನ್ಯಾಸಕರೇ ಇಲ್ಲದೆ ನಡೆಯುತ್ತಿರುವ ಇಲ್ಲಿನ ಕಿರಿಯ ಕಾಲೇಜಿನ ವಿದ್ಯಾರ್ಥಿಗಳು ಕಟ್ಟ ಕಡೆಗೆ ತೀವ್ರ ಚಳುವಳಿಯ ಮಾರ್ಗಕ್ಕೆ ಇಳಿಯುವ ಸಿದ್ಧತೆ ನಡೆಸಿದ್ದಾರೆ.

ಸುಸಜ್ಜಿತವಲ್ಲದ ಪ್ರಯೋಗ ಶಾಲೆ ಮತ್ತು ಗ್ರಂಥಭಂಡಾರ, ಪೀಠೋಪಕರಣಗಳ ಕೊರತೆ, ಶುದ್ಧವಾದ ಕುಡಿಯುವ ನೀರು ಮತ್ತು ಮೂತ್ರಿಗಳು, ಆಟದ ಮೈದಾನ–ಹೀಗೆ ಯಾವ ಬಾಬಿನಲ್ಲೂ ಕನಿಷ್ಠ ಅವಶ್ಯಕತೆಯ ಅರ್ಹತೆಯನ್ನೂ ಇಲ್ಲದ ಕಾಲೇಜಿನಲ್ಲಿ ಮೂಲತಃ ಶಿಕ್ಷಕರೇ ದೊಡ್ಡ ಕೊರತೆಯಾಗಿರುವುದು ವಿದ್ಯಾರ್ಥಿಗಳ ಮನಸ್ಸಿನಲ್ಲಿ ಭವಿಷ್ಯದ ಬಗ್ಗೆ ತೀವ್ರವಾದ ಆತಂಕವನ್ನು ಹುಟ್ಟಿಸಿದೆ.

ಕೆಲವು ಸಮಸ್ಯೆಗಳು

ಒಟ್ಟು ಇರಬೇಕಾದ ಹನ್ನೊಂದು ಜನ ಉಪನ್ಯಾಸಕರ ಪೈಕಿ ೬ ಜನ ಮಾತ್ರ ಇದ್ದಾರೆ. ಆರು ವರ್ಷಗಳಿಂದಲೂ ಉಪನ್ಯಾಸಕರನ್ನೇ ಕಾಣದ ವಿಷಯಗಳಿವೆ. ಈ ಮಧ್ಯೆ ಈ ವರ್ಷ ಬದಲಿ ಉಪನ್ಯಾಸಕರನ್ನು ನೇಮಕ ಮಾಡದೆ ಇನ್ನೂ ಮೂವರನ್ನು ವರ್ಗ ಮಾಡಲಾಗಿದೆ.

ಇಂಗ್ಲಿಷ್ ಮತ್ತು ಭೌತಶಾಸ್ತ್ರಗಳಂಥ ಅತಿ ಕಠಿಣ ವಿಷಯಗಳಲ್ಲೇ ಅಧ್ಯಾಪಕರು ಕಳೆದ ಮೂರು ವರ್ಷಗಳಿಂದ ಇಲ್ಲ. ಕಳೆದ ವರ್ಷವೇ ಈ ಬೇಡಿಕೆಯ ಮೇಲೆ ವಿದ್ಯಾರ್ಥಿಗಳು ಒಂದು ದಿನ ಚಳವಳಿ ನಡೆಸಿದ್ದರು. ಆಗ ಭೇಟಿ ಕೊಟ್ಟಿದ್ದ ಬೇಗಾನೆ ರಾಮಯ್ಯನವರು ಕೊಟ್ಟ ಭರವಸೆಯಂತೆ ಒಂದು ತಾತ್ಕಾಲಿಕ ವ್ಯವಸ್ಥೆ ಮಾಡಿದರೂ ಅದು ಸಮರ್ಪಕವಾಗದೆ ವರ್ಷ ಹಾಗೇ ಕಳೆಯಿತು.

ಪ್ರಯೋಗ ಶಾಲೆಯ ಅಭಿವೃದ್ಧಿಗೆ ಹಣ ಮಂಜೂರಾಗಿರುವುದಾಗಿ ಕಳೆದ ವರ್ಷ ಬೇಗಾನೆಯವರು ಬಂದಿದ್ದಾಗಲೇ ಪ್ರಕಟಿಸಲಾಗಿದ್ದರೂ ಇನ್ನೂ ಅದೆ ಕಾರ್ಯರೂಪಕ್ಕೆ ಬಂದಿಲ್ಲವೆನ್ನು ವಿದ್ಯಾರ್ಥಿಗಳು ಪ್ರಶ್ನಿಸುತ್ತಾರೆ.

→

ಹೆದ್ಸೆ ಕೃಷ್ಣಸ್ವಾಮಿ ಕೊಲೆ ಪ್ರಕರಣ: ಮೂವರಿಗೆ ಜೀವಾವಧಿ ಶಿಕ್ಷೆ

ಕೊಪ್ಪ: ಇಲ್ಲಿಗೆ ಸಮೀಪದ ಹೆದ್ಸೆಯ ಕೃಷ್ಣಸ್ವಾಮಿಯವರ ಕೊಲೆಯ ವಿಚಾರಣೆ ಚಿಕ್ಕಮಗಳೂರಿನ ಸೆಷನ್ಸ್ ನ್ಯಾಯಾಲಯದಲ್ಲಿ ಮುಗಿದಿದ್ದು, ಟಿ. ಕೆ. ನಾರಾಯಣ, ಕೊರಗ ಪೂಜಾರಿ ಮತ್ತು ಬಾಲಸುಬ್ರಮಣ್ಯ ಇವರುಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿ ನ್ಯಾಯಾಧೀಶ ಎಸ್. ಎಸ್. ವೇಣುಗೋಪಾಲ್ ಅವರು ಜು. ೫ ರಂದು ತೀರ್ಪಿತ್ತಿದ್ದಾರೆ. ಇನ್ನೊಬ್ಬ ಆರೋಪಿ ಪೊಡಿಯನನ್ನು ಖುಲಾಸೆ ಮಾಡಿದ್ದಾರೆ.

ಜನವರಿ ೧೦ ರಂದು ಹೆದ್ಸೆಯ ಬಳಿ ಈ ಕೊಲೆ ನಡೆದಿತ್ತು. ಕೊಲೆಯಾದ ವ್ಯಕ್ತಿಯಿಂದ ೧೦ ಸಾವಿರ ರೂ.ಗಳನ್ನು ಆಪಾದಿತರು ಅಪಹರಿಸಿದ್ದರೆಂದು ಆರೋಪಿಸಲಾಗಿತ್ತು. ಕೇವಲ ೬ ತಿಂಗಳಲ್ಲಿ ವಿಚಾರಣೆ ಮುಗಿದು ತೀರ್ಪು ಹೊರಬಿದ್ದಿರುವುದು ಒಂದು ವಿಶೇಷವೆನ್ನಬಹುದು.

ಬಾಶಾಸಾಬ್ ಪ್ರಾಸಿಕ್ಯೂಶನ್ ಪರ ವಕೀಲರಾಗಿದ್ದರು.

ಕೊಪ್ಪ ಪ್ರ. ದ. ಕಾಲೇಜಿಗೆ ೧೦ ಪ್ರವೇಶ

ಕೊಪ್ಪ: ಇಲ್ಲಿನ ಪ್ರಥಮ ದರ್ಜೆ ಕಾಲೇಜಿಗೆ ಜುಲೈ ೧೦ ರ ಶನಿವಾರದವರೆಗೆ ೧೦ ಜನ ವಿದ್ಯಾರ್ಥಿಗಳು ಪ್ರವೇಶ ಪಡೆದಿದ್ದಾರೆ. ಈವರೆಗೆ ೧೨೦ ಅರ್ಜಿಗಳನ್ನು ಕೊಡಲಾಗಿದ್ದು, ಸೋಮವಾರದಿಂದ ಪ್ರವೇಶ ಹೆಚ್ಚುವ ನಿರೀಕ್ಷೆಯಿದೆ. ಅಗತ್ಯ ಬಿದ್ದಲ್ಲಿ ಪ್ರವೇಶ ಸ್ವೀಕರಿಸುವ ಕೊನೇ ದಿನವನ್ನು ಮುಂದೂಡುವ ಸಂಭವವೂ ಇದೆ.

ಈ ವಾರದ ಕೊನೆಯೊಳಗೆ ಪ್ರಿನ್ಸಿಪಾಲರ ನೇಮಕವಾಗುವ ಭರವಸೆಯಿದೆಯೆಂದು ಕಾಲೇಜು ಪ್ರಾರಂಭದ ಜವಾಬ್ದಾರಿ ಹೊತ್ತಿರುವ ಕಾಲೇಜು ಶಿಕ್ಷಣದ ಸಹಾಯಕ ನಿರ್ದೇಶಕ ಡಿ. ರಂಗನಾಥ್ 'ದೀವಟಿಗೆ' ಗೆ ತಿಳಿಸಿದ್ದಾರೆ.

ಅನುಮಾನ–ಪರಿಹಾರ

ಕಲೆ ಮತ್ತು ವಿಜ್ಞಾನ ವಿಷಯಗಳಲ್ಲಿ ಪಿ ಯು ಸಿ ಮುಗಿಸಿದವರಿಗೂ ಬಿ. ಕಾಂ. ತರಗತಿಗೆ ಪ್ರವೇಶ ಕೊಡುವಲ್ಲಿ ಅಡಚಣೆಯೇನೂ ಇಲ್ಲವೆಂದೂ ರಂಗನಾಥ್ ತಿಳಿಸಿ, ಈ ಬಗ್ಗೆ ಹಲವಾರು ವಿದ್ಯಾರ್ಥಿಗಳು ತಮ್ಮಬಳಿ ಅನುಮಾನ ವ್ಯಕ್ತಪಡಿಸಿದ್ದರೆಂದು ಹೇಳಿದ್ದಾರೆ.

ಪೊಳ್ಳು ಆಶ್ವಾಸನೆ

ಕಳೆದ ಆಗಸ್ಟ್ ತಿಂಗಳಲ್ಲಿ ಪ್ರಾಥಮಿಕ ಶಿಕ್ಷಣದ ಮಂತ್ರಿ ನಾಗಪ್ಪ ಕೇಶವಮೂರ್ತಿಯವರು ಬಂದಿದ್ದಾಗ ಸಲ್ಲಿಸಿದ್ದ ಹಲವು ಬೇಡಿಕೆಗಳಲ್ಲಿ ಶೌಚಗೃಹದ ಬೇಡಿಕೆಯೂ ಸೇರಿತ್ತು. ಅವರು ತಕ್ಷಣ ಕ್ರಮ ಕೈಗೊಳ್ಳುವ ಆಶ್ವಾಸನೆಯನ್ನೂ ಕೊಟ್ಟಿದ್ದರು. ಆದಾಗಿ ಒಂದು ವರ್ಷ ಸಂದರೂ, ಈ ಕನಿಷ್ಠ ಸೌಲಭ್ಯವಿಲ್ಲದೆ ಮುಖ್ಯವಾಗಿ ನೂರಾರು ಹೆಣ್ಣು ಮಕ್ಕಳು ಪಡುತ್ತಿರುವ ಪಾಡು ಉಪಾಧ್ಯಾಯ ವೃಂದಕ್ಕೂ ಮನ ಕಲಕಿದೆ.

(೪ ನೇ ಪುಟಕ್ಕೆ)

ಕೈ ಕೊಟ್ಟ ಮಳೆ: ಸೊರಗುತ್ತಿರುವ ಮಳೆನಾಡು

ಮಳೆನಾಡು: ಇಷ್ಟು ಹೊತ್ತಿಗೆ ಮುಂಗಾರಿನ ಆರ್ಭಟಕ್ಕೆ ಸಿಕ್ಕಿರಬೇಕಾಗಿದ್ದ ಮಲೆನಾಡು ಸೀಮೆ ಮಳೆಯಿಲ್ಲದೆ ಸೊರಗುತ್ತಿದೆ.

ಎಲ್ಲ ಕಡೆ ಗದ್ದೆ ನೆಟ್ಟಿ ಹೆಚ್ಚು ಕಡಿಮೆ ಮುಗಿದಿರಬೇಕಾಗಿದ್ದ ಅಥವಾ ಬಿರುಸಿನಿಂದ ನಡೆಯುತ್ತಿರಬೇಕಾಗಿದ್ದ ಈ ಹೊತ್ತಿನಲ್ಲಿ ನೀರೇ ಆಗದೆ ಗದ್ದೆಗಳೆಲ್ಲ ಆಕಾಶ ನೋಡುತ್ತಿವೆ. ಸಾಮಾನ್ಯವಾಗಿ ನೀರಿನ ಕೊರತೆ ಅನುಭವಿಸದಿದ್ದ ಪ್ರದೇಶಗಳೂ ಕೂಡ ಮಳೆಗೆ ಬಾಯ್ಬಿಡುವ ಪರಿಸ್ಥಿತಿ ಉಂಟಾಗಿದೆ.

ಈ ವರ್ಷ ಎಂದಿಗಿಂತ ಒಂದು ವಾರ ಮುಂಚೆಯೇ ಮಳೆ ಕಾಣಿಸಿತ್ತೆನ್ನಬಹುದು. ಎಲ್ಲ ಕಡೆ ಸಸಿ ಅಗಡಿ ಆಗಿ, ನೆಟ್ಟಿಗೆ ಗದ್ದೆಯನ್ನು ತಯಾರು ಮಾಡುವ ಕೆಲಸ ನಡೆಯುತ್ತಿದ್ದಾಗಲೇ ಮಳೆ ನಿಂತು ಬೊಳು ವಾಗ ತೊಡಗಿತು. ಅಡಿಕೆ ಬೆಳೆಗಾರರೆಲ್ಲ ಸಂತೋಷದಿಂದ ತೋಟದ ಔಷಧಿ ಪೂರೈಸಿ, ಪುನಃ ಗದ್ದೆ ಕೆಲಸಕ್ಕೆ ಅಣಿಯಾದರು. ಆದರೆ ಹೋದ ಮಳೆ ಹದಿನೈದು ದಿನವಾದರೂ ಬಾರದಿದ್ದಾಗ ಅವರ ಎದೆ ಡವಗುಟ್ಟ ತೊಡಗಿತು.

ಈಗ ಎಲ್ಲ ಕಡೆ ಸಸಿ ಅಗಡಿ ನೆಟ್ಟಿಗೆ 'ರೆಡಿ'ಯಾಗಿ ನಿಂತಿದೆ– ಆದರೆ ನೀರಿಲ್ಲದೆ ಕೆಂಪಾಗುತ್ತಿವೆ. ಮೋಡ ಮುಸುಕಿದೆ. ದಿನಕ್ಕೆ ಒಂದೆರಡಾವರ್ತಿ ಜೋರಾಗಿ 'ಗೌಜಿ ಕೊಂಡು.' ಮಳೆಬರುವಂತಾಗುತ್ತದೆ. 'ಹಾಂ, ಅಂತೂ ಮಳೆ ಹಿಡಿದ ಹಾಗೆ ಕಾಣುತ್ತೆ' ಅಂತ ಹೇಳಿ ಮುಗಿಸುವಷ್ಟರಲ್ಲಿ ಪುನಃ ಹೊಳೆ.

ಮಲೆನಾಡಿನ ಅಂಚಿನ ಕಡೂರು, ತರೀಕೆರೆ ತಾಲೂಕುಗಳು, ಚಿಕ್ಕಮಗಳೂರು ತಾಲೂಕಿನ ಕೆಲವು ಭಾಗಗಳು ಈಗಾಗಲೇ ಕ್ಷಾಮದ ದವಡೆಗೆ ತುತ್ತಾಗಿರುವ ವರದಿಗಳಿವೆ. ಇನ್ನೂ ಕೆಲವು ದಿನ ಮಳೆ ಹೋದರೆ "ದಕ್ಷಿಣದ ಚಿರಾಪುಂಜಿ"ಯ ಆಜುಬಾಜಿನಲ್ಲೂ ಕ್ಷಾಮ ಪರಿಹಾರ ಕಾಮಗಾರಿ ನಡೆಸಿದರೆ ಆಶ್ಚರ್ಯವಿಲ್ಲ.

ದುಬಾರಿ ಲಾರಿ ಬಾಡಿಗೆ: ಸಿಮೆಂಟ್ ಸಾಗಣೆ ಕುಂಠಿತ

ಶೃಂಗೇರಿ: ಇಲ್ಲಿಗೆ ಸಿಮೆಂಟ್ ಸಾಗಿಸುತ್ತಿರುವ ಲಾರಿಗಳವರು ಸರ್ಕಾರ ನಿಗದಿ ಮಾಡಿದ ಬಾಡಿಗೆಗಿಂತ ಬಹಳ ಹೆಚ್ಚು ಕೇಳುವುದರಿಂದ ಸಿಮೆಂಟ್ ಹಂಚಿಕೆಗೆ ತೀವ್ರ ಪೆಟ್ಟು ಬೀಳುತ್ತಿದೆ ಎನ್ನಲಾಗಿದೆ.

ಸರ್ಕಾರ ಬಾಗಲಕೋಟೆಯ ಕಾರ್ಖಾನೆಯಿಂದ ಈ ಪ್ರದೇಶಕ್ಕೆಲ್ಲ ಸಿಮೆಂಟನ್ನು ಮಂಜೂರು ಮಾಡಿ, ಅಲ್ಲಿಂದ ಇಲ್ಲಿಗೆ ಲಾರಿ ಬಾಡಿಗೆಯನ್ನು ೧ ಲೋಡಿಗೆ ೧,೬೦೦ ರೂ. ಎಂದು ನಿಗದಿ ಮಾಡಿದೆ.

ಆದರೆ "ಪ್ರಪಂಚದ ಕೊನೆಯಂತಿರುವ" ಈ ಮೂಲೆಯ ಊರುಗಳಿಂದ–ಅದರಲ್ಲೂ ಮಳೆಗಾಲದಲ್ಲಿ– ಲಾರಿಯವರಿಗೆ ಹಿಂದಕ್ಕೆ ಹೋಗುವಾಗ ಭರ್ತಿ ಏನೂ ಸಿಗುವುದಿಲ್ಲವಂತೆ. ಇದರಿಂದ ತಮಗೆ ಗಿಟ್ಟುವುದಿಲ್ಲವೆಂದು ಅವರು ೨,೫೦೦ ರೂ.ಗಳನ್ನು ಒಂದು ಲೋಡಿಗೆ ಕೇಳುತ್ತಾರೆ ಎನ್ನಲಾಗಿದೆ.

ಸರ್ಕಾರದ ದರಕ್ಕಿಂತ ಇಷ್ಟು ಹೆಚ್ಚಿನ ಬಾಡಿಗೆ ಕೊಟ್ಟು, ಸರ್ಕಾರ ನಿಗದಿ ಮಾಡಿದ ದರದಲ್ಲಿ ಸಿಮೆಂಟ್ ಮಾರಲು ಸಾಧ್ಯವಿಲ್ಲವೆಂದು ಹಂಚಿಕೆದಾರರು ಹೇಳುತ್ತಾರೆಂದು ಹೇಳಲಾಗುತ್ತಿದೆ.

ಒಟ್ಟಾರೆ ಈ ರಂಪದಲ್ಲಿ ಜನಸಾಮಾನ್ಯರಿಗೆ ಸಿಮೆಂಟ್ ಸಿಗುವುದು ಬಹಳ ಕಷ್ಟವಾಗಿದೆಯೆಂದು ಹೇಳಲಾಗಿದೆ.

ಫಲ ಕೊಟ್ಟ ವರದಿ

ಕೊಪ್ಪ: ನಿಮ್ಮ ಈ ಪತ್ರಿಕೆಯಲ್ಲಿ ಪ್ರಕಟವಾದ ವರದಿಯೊಂದರ ಫಲವಾಗಿ ಬಹಳ ದಿನದಿಂದ ಬಗೆಹರಿಯದಿದ್ದ ಸಮಸ್ಯೆಯೊಂದು ಬಗೆಹರಿದಿರುವುದಾಗಿ ಸುದ್ದಿ ಬಂದಿದೆ.

ಜಯಪುರದ 'ಗಿರಿಜನ ಮಕ್ಕಳ' ಶಾಲೆಗೆ ಹೊರಿಗೆ ತರುತ್ತಿದ್ದ ಕಾರ್ ಯಲ್ಲಿ ಬರ ಹೆಣ್ಣು ಮಕ್ಕಳಿಗಾಗುತ್ತಿದ್ದ ಬವಣೆ ಕುರಿತ ನಮ್ಮ ೧೩–೬–೮೨ ರ ವರದಿ ಪ್ರಕಟವಾದ ೧೦ ದಿನದಲ್ಲೇ, ನಾಲ್ಕೈದು ತಿಂಗಳಿಂದ ಬಾರದಿದ್ದ ಸ್ಪೈರೊಹಾ ಹಣ ಬಟವಾಡೆ ಆಗಿದೆಯಂತೆ. ಜೊತೆಗೆ ಇತರ ಸೌಲಭ್ಯಗಳೂ ಸಿಗುತ್ತಿವೆಯಂತೆ.

ಈ ವಿಷಯವನ್ನು ಪತ್ರಿಕೆಗೆ ತಿಳಿಸಿರುವ ಪೋಷಕರು, ಸಮಸ್ಯೆ ಬಗೆಹರಿಯಲು ಕಾರಣವಾದ 'ದೀವಟಿಗೆ' ಗೆ ವಂದನೆ ಸೂಚಿಸಿದ್ದಾರೆ.

ಕೇಶಭಕ್ಷಣ ಪ್ರಿಯೆ ಕಿಶೋರಿ!

ಪಾಂಡಿಚೆರಿಯ ೯ ವರ್ಷದ ಹುಡುಗಿಯೊಬ್ಬಳಿಗೆ ತನ್ನ ತಲೆಗೂದಲನ್ನೇ ತಿನ್ನುವ ವಿಚಿತ್ರ ಅಭ್ಯಾಸವಿತ್ತಂತೆ.

ಪದೇ ಪದೇ ಡಯೇರಿಯಾ ರೋಗಕ್ಕೆ ತುತ್ತಾಗುತ್ತಿದ್ದ ಈಕೆಯನ್ನು ಪಾಂಡಿಚೆರಿಯ ಸರ್ಕಾರಿ ಆಸ್ಪತ್ರೆಯಲ್ಲಿ ಬೇರಿಯಂ ಎಕ್ಸ್‌ರೇ ಪರೀಕ್ಷೆಗೆ ಒಳಪಡಿಸಿದಾಗ ಹೊಟ್ಟೆಯ (ಜಠರದ) ಒಳಗೆಲ್ಲ ಕೂದಲು ಹರಡಿಕೊಂಡಿರುವುದು ಪತ್ತೆಯಾಯಿತಂತೆ.

ಕಳೆದ ವಾರ ಪಾಂಡಿಚೆರಿಯ ಸರ್ಕಾರಿ ಆಸ್ಪತ್ರೆಯಲ್ಲಿ ಆಕೆಗೆ ಶಸ್ತ್ರ ಚಿಕಿತ್ಸೆ ನಡೆಸಿ ಕೂದಲನ್ನು ಹೊರ ತೆಗೆದಾಗ ಒಟ್ಟು ೬೦೦ ಗ್ರಾಮಿನಷ್ಟು ಕೂದಲು ಇತ್ತಂತೆ.

ಆಕೆಗೆ ತಲೆಗೂದಲು ತಿನ್ನುವ ಅಭ್ಯಾಸವಿತ್ತೆಂದು ಆಕೆಯ ತಾಯಿ ಖಚಿತಪಡಿಸಿದ್ದಾಗಿಯೂ, ಹುಡುಗಿಯನ್ನು ಈಗ ಮನೋವೈಜ್ಞಾನಿಕ ಪರೀಕ್ಷೆಗೆ ಒಳಪಡಿಸಲಾಗಿದೆಯೆಂದೂ ವರದಿಯಾಗಿದೆ..

ಟಪಾಲು ಸರಬರಾಜು ವ್ಯವಸ್ಥೆ ದಿಢೀರ್ ಬದಲಾವಣೆ

ಹಲವೆಡೆ ಬಟವಾಡೆ ತಡ, ಅನಾನುಕೂಲ

ಕೊಪ್ಪ: ಇಲ್ಲಿನ ಪ್ರಧಾನ ಅಂಚೆ ಕಚೇರಿ ವ್ಯಾಪ್ತಿಯ ಹಲವಾರು ಉಪ ಕಚೇರಿಗಳಿಗೆ ಟಪಾಲು ಸರಬರಾಜು ವ್ಯವಸ್ಥೆಯಲ್ಲಿ ಜೂನ್ ೨೩ ರಿಂದ ದಿಢೀರ್ ಬದಲಾವಣೆಯಾಗಿದ್ದು, ಅಡ್ಡಗದ್ದೆ, ಬಂಡಿಗಡಿ, ಹೊಸಕೊಪ್ಪ ಮುಂತಾದ ಅನೇಕ ಕಡೆ ಅಂಚೆ ವ್ಯವಸ್ಥೆ ಅಸ್ತವ್ಯಸ್ತವಾಗಿದೆಯೆಂದು ಹೇಳಲಾಗಿದೆ.

ಉದಾಹರಣೆಗೆ ಅಡ್ಡಗದ್ದೆಯ ಸ್ಥಿತಿ ನೋಡಿ. ಇಲ್ಲಿಗೆ ಹಿಂದೆ ಬೀರೂರಿನಿಂದ ನೇರವಾಗಿ ಅಂಚೆ ಚೀಲ ೧೨ ಗಂಟೆಗೆ ಬರುತ್ತಿತ್ತು. ೨.೩೦ ಕ್ಕೆ ಅದೇ ರೀತಿ ನೇರ ಚೀಲ ಹೋಗುತ್ತಿತ್ತು. ಕೊಪ್ಪದಿಂದ ಬರುವ-ಹೋಗುವ ಚೀಲದಲ್ಲೂ ಟಪಾಲು ವಿನಿಮಯ ನಡೆಯುತ್ತಿತ್ತು.

ಈಗ ಹಾಗಲ್ಲ. ಇಲ್ಲಿಯ ಪತ್ರಗಳು ಶೃಂಗೇರಿಗೆ ಹೋಗಿ ೨-೩೦ ಕ್ಕೆ ಬರಬೇಕು. ಅಷ್ಟರಲ್ಲಿ ೧೧ ಗಂಟೆಗೇ ಅಲ್ಲಿ ಅಂಚೆಗೆ ಹಾಕಲಾದ ಪತ್ರಗಳನ್ನೆಲ್ಲ ಕಟ್ಟಿ ಶೃಂಗೇರಿಗೆ ಕಳಿಸಬೇಕು. ಅನಂತರ ಹಾಕಿದನ್ನೆಲ್ಲ ಮರುದಿನಕ್ಕೇ— ಅದೂ ಪುನಃ ಶೃಂಗೇರಿಗೆ ಹೋಗಿಯೇ.

ಕೊಪ್ಪದಿಂದ ಬರ-ಹೋಗುವ ಚೀಲದಲ್ಲಿ ಟಪಾಲು ರವಾನೆ ಇಲ್ಲ. ಎಲ್ಲಾ ಶೃಂಗೇರಿಯ ಮೂಲಕವೇ ಓಡಾಡಬೇಕು.

ಅಂದರೆ ಅಲ್ಲಿನ ಬ್ಯಾಂಕು, ಶಾಲೆಗಳು, ಪಂಚಾಯ್ತಿ ಕಚೇರಿ ಮುಂತಾದವು ಮತ್ತು ಸಾರ್ವಜನಿಕರೂ ಸಹ ಅಂದಂದಿನ ಟಪಾಲು ನೋಡಿ, ಜವಾಬು ಬರೆಯಬಹುದಿತ್ತು. ಆದರೆ ಈಗ "ಮರು ಟಪಾಲು" ಎಂಬುದಕ್ಕೆ ಅರ್ಥವೇ ಇಲ್ಲವಾಗಿದೆ ಎನ್ನುತ್ತಾರೆ ಊರವರು.

ಇದೇ ರೀತಿ ಬಂಡಿಗಡಿಯ ಪತ್ರಗಳ ಓಡಾಟ ಕಮ್ಮರಡಿಯ ಮೂಲಕ. ಹೊಸಕೊಪ್ಪ ಮತ್ತಿತರ ಉಪ ಕಚೇರಿಗಳ ಗೋಳೂ ಇದೇ.

ಅಂಚೆ ಇಲಾಖೆ ಒಂದೆಡೆ ದರಗಳನ್ನು ವಿಪರೀತ ಏರಿಸುತ್ತಿದ್ದರೆ, ಇನ್ನೊಂದೆಡೆ ಸೇವೆಯಲ್ಲಿ ಹಿಂದೆ ಹಿಂದೆ ಹೋಗುತ್ತಿದೆ ಎಂದು ಜನ ಹಲ್ಲು ಕಡಿದು ಹೇಳುವಷ್ಟಾಗಿದೆ.

ಇಲಾಖೆಯ "ತಾಂತ್ರಿಕ ಕಾರಣಗಳು" ಏನೇ ಇರಲಿ, ಜನರಿಗೆ ಹೀಗೆ ಅಸೌಕರ್ಯ ಮಾಡುವುದು ನ್ಯಾಯವೇ? ಎಂದೂ ಜನ ಕೇಳುತ್ತಿದ್ದಾರೆ.

ಈ ಮಧ್ಯೆ ಬೀರೂರು-ಆಗುಂಬೆ ನಡುವೆ ಓಡಾಡುತ್ತಿದ್ದ ಶಂಕರ್ ಕಂಪೆನಿಯ ಬಸ್ಸನ್ನು ಜುಲೈ ಒಂದರಿಂದ ನಿಲ್ಲಿಸಿರುವುದರಿಂದ ಕೊಪ್ಪಕ್ಕೆ ಬರುವ ಅಂಚೆಯೂ ಬಹಳ ತಡವಾಗುತ್ತಿದೆ. ಮೊದಲು ಹತ್ತೂವರೆ ಗಂಟೆಯ ಹೊತ್ತಿಗೆಲ್ಲ ಬಟವಾಡೆಗೆ ತೊಡಗುತ್ತಿದ್ದರೆ ಈಗ ಬೀರೂರು ಶೃಂಗೇರಿ ಟಪಾಲು ಬಸ್ಸಿನಲ್ಲಿ ಬಂದ ಅಂಚೆ ಬಟವಾಡೆಗೆ ಸಿದ್ಧವಾಗುವಾಗ ಹನ್ನೊಂದೂವರೆ ಆಗುತ್ತಿದೆ.

ಅದೇ ರೀತಿ, ಮೊದಲು ಸಂಜೆ ೬-೩೦ಕ್ಕೆ ಕೊನೇ ಕ್ಲಿಯರೆನ್ಸ್ ಇದ್ದು, ಹೆಚ್ಚು ಕಡಿಮೆ ದಿನದ ಕೊನೆಯವರೆಗಿನ ಪತ್ರಗಳೆಲ್ಲಾ ರವಾನೆಯಾದ ಹಾಗೆ ಆಗುತ್ತಿತ್ತು. ಆದರೆ ಈಗ ೩-೩೦ಕ್ಕೇ ಕೊನೆಯ

(೬ನೇ ಪುಟಕ್ಕೆ)

ಸುದ್ದಿಯಾಗುವ ಬಡವರು

"ಒಬ್ಬನ ಜೊತೆ ಓಡಿ ಹೋದ್ಲಂತೆ
ಹೊಲೇರ ಮಾದನ ಮಗಳು ಕರಿಸಂಕಿ"
ಇಂದು ಮುಂಜಾನೆ ಸೂರ್ಯ ಹುಟ್ಟುವ ಮೊದಲೇ
ಹುಟ್ಟಿತು ಸುದ್ದಿ. ಊರ ಗೌಡ್ರು, ಶಾಸ್ತ್ರಿ,
ಭಟ್ರ ಅಂಗಡಿ ಕಟ್ಟೆಗಳಲ್ಲಿ,
ಊರ ಬಾವಿಯ ಸಾಲು ಸಾಲು ಕೊಡಗಳಲ್ಲಿ
ಶಾಲೆಗೆ ಹೋಗುವ "ನಾಳಿನ ಪ್ರಜೆ"
ಗಳ ನಾಲಿಗೆಯಲ್ಲಿ:
"ಹಾಂಗಂತೆ, ಹೀಂಗಂತೆ"— ಸುದ್ದಿಯೋ ಸುದ್ದಿ.
ಸುದ್ದಿ ತಿಳಿದ ಹೊಲೇರ ಮಾದ ಭೂಮಿಗೆ
ಸೇರಿಹೋದ ಮತ್ತೆನ್ನೆಂದೂ ಏಳದಂತೆ
ಊರಿನ ಭವ್ಯ ಮನೆಗಳಲ್ಲಿ
ವೈಭವ ಕೊಠಡಿಗಳಲ್ಲಿ
ಶ್ರೀಮಂತ ಕಾರು-ಬಾರುಗಳಲ್ಲಿ
ಸಿನಿಮಾ ಥಿಯೇಟರುಗಳಲ್ಲಿ
ಸಿರಿವಂತ ಮಕ್ಕಳು ಕಾಲೇಜುಗಳಲ್ಲಿ
ನಡೆಸುವ ಪ್ರೇಮ (ಕಾಮ?) ದಾಟಗಳು
ಹಗಲ ವೇಶ್ಯಾನಾಟಕಗಳು
ಸುದ್ದಿಯಾಗುವುದೇ ಇಲ್ಲ!
ಬಡವರು, ದಲಿತರು ನಿಂತರೂ ಕುಂತರೂ
ನಡೆದರೂ ಸುದ್ದಿಯಾಗುತ್ತಾರೆ
ಸುದ್ದಿಯ ಜನಕರು ಇರುವವರೆಗೆ
ಈ ನಮ್ಮ ಊರೊಳಗೆ

—ಎಲ್. ಎನ್. ಸದಾಶಿವ ಭಾಸರಿ

ಔಷಧ: ಐದರಲ್ಲೊಂದು ಖೋಟಾ

ಹೊಸದಿಲ್ಲಿ: ಔಷಧ ಸ್ಯಾಂಪಲ್‌ಗಳನ್ನು ವಿಶ್ಲೇಷಿಸಿದ ರಾಷ್ಟ್ರೀಯ ಪ್ರಯೋಗಾಲಯಗಳ ವರದಿಗಳು ನಿಜವಿದ್ದಲ್ಲಿ ಭಾರತೀಯ ಮಾರುಕಟ್ಟೆಯಲ್ಲಿರುವ ಔಷಧಗಳಲ್ಲಿ ಐದರಲ್ಲಿ ಒಂದು ಪಾಲು ಕಳಪೆ ಅಥವಾ ಖೋಟಾ ಆಗಿದೆ.

1968ರಿಂದ 1979ರ ವರೆಗಿನ ಭಾರತದ ಔಷಧ ನಿಯಂತ್ರಣಾಧಿಕಾರಿಯವರ ವರದಿಗಳನ್ನು ಅಭ್ಯಸಿಸಿದರೆ ದೇಶೀಯವಾಗಿ ಉತ್ಪಾದನೆಯಾಗುವ ಮತ್ತು ಆಮದಿತ ಔಷಧ ದ್ರವ್ಯಗಳಲ್ಲಿ ಗರಿಷ್ಠ ಶೇಕಡಾ [illegible] ಕಳಪೆಯಾಗಿರುವುದು ವ್ಯಕ್ತವಾಗಿದೆ. ಇದು ಅವಶ್ಯಕ ಔಷಧಗಳಿಗೂ ಅನ್ವಯವಾಗುತ್ತದೆ.

ಔಷಧಗಳು ಮತ್ತು ಸುಗಂಧ ದ್ರವ್ಯಗಳ ನಿಯಮಾನುಸಾರ ಔಷಧಗಳನ್ನು ಮುಂಬೈ, ಕಲ್ಕತ್ತಾ, ಕೊಚ್ಚಿ, ದಿಲ್ಲಿ, ಮದ್ರಾಸ್ ಮತ್ತು ವಿಶಾಖಪಟ್ಟಣದಂತಹ ನಿರ್ದಿಷ್ಟ ಬಂದರುಗಳಿಂದ ಮಾತ್ರ ಆಮದು ಮಾಡಲಾಗುತ್ತದೆ. ಕೇಂದ್ರೀಯ ಔಷಧ ಸಂಸ್ಥೆಯ ಅಧಿಕಾರಿಗಳು ಈ ಬಂದರಿನಲ್ಲಿ ಸ್ಯಾಂಪಲ್‌ಗಳನ್ನು ಸಂಗ್ರಹಿಸಿ ಕಲ್ಕತ್ತದಲ್ಲಿರುವ ಕೇಂದ್ರೀಯ ಔಷಧ ಪ್ರಯೋಗಾಲಯಕ್ಕೆ ವಿಶ್ಲೇಷಣೆಗೆ ಕಳುಹಿಸುತ್ತಾರೆ 1968ರಿಂದ 1979ರ ವರೆಗೆ ಲಭ್ಯವಿರುವ ವರದಿಗಳಿಂದ ಪ್ರತಿವರ್ಷ ಭಾರತೀಯ ಮಾರುಕಟ್ಟೆಗೆ ಕಳಪೆ ಔಷಧಗಳು ಬಂದಿರುವುದು ಗೊತ್ತಾಗುತ್ತದೆ.

1969ರಲ್ಲಿ ಪರೀಕ್ಷೆ ಮಾಡಲಾದ 729 ಆಮದಿತ ಔಷಧಿ ಸ್ಯಾಂಪಲ್‌ಗಳಲ್ಲಿ 66 ಕಳಪೆಯಾಗಿದ್ದವು. 1970ರಲ್ಲಿ ಶೇಕಡಾ 9ರಷ್ಟು ಪರೀಕ್ಷಿತ ಆಮದಿತ ಸ್ಯಾಂಪಲ್‌ಗಳು ಅಶುದ್ಧವಾಗಿದ್ದುವು 1978-79ರಲ್ಲಿ 100 ಸ್ಯಾಂಪಲ್‌ಗಳಲ್ಲಿ ಒಂದು ಖೋಟಾ ಆಗಿತ್ತು.

ಕಟ್ಟುನಿಟ್ಟಿನ ಮೇಲ್ವಿಚಾರಣೆಯಲ್ಲಿ ಆಮದು ಮಾಡಲಾದ ಔಷಧಗಳಲ್ಲೇ ಇಷ್ಟು ದೊಡ್ಡ ಪ್ರಮಾಣದವು ಕಳಪೆಯಾಗಿದ್ದರೆ ಅಕ್ರಮವಾಗಿ ಆಮದು ಮಾಡಲಾದ ಔಷಧಗಳ ಗುಣಮಟ್ಟದ ಬಗ್ಗೆ ಹೇಳುವುದೇ ಬೇಡ.

ಕಲ್ಕತ್ತದ ಈ ಪ್ರಯೋಗಾಲಯ 21 ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಸರಕಾರಿ ಔಷಧ ಪರೀಕ್ಷಕ ಸಂಸ್ಥೆಯಾಗಿ ಕಾರ್ಯ ನಿರ್ವಹಿಸುತ್ತಿದೆ. ದೇಶದ ಮಾರುಕಟ್ಟೆಯಿಂದ ಮತ್ತು ಔಷಧ ತಯಾರಕ ಸಂಸ್ಥೆಗಳಿಂದ ರಾಜ್ಯ ಔಷಧ ಇನ್ಸ್‌ಪೆಕ್ಟರುಗಳು ಮತ್ತು ವಲಯಾಧಿಕಾರಿಗಳು ಸಂಗ್ರಹಿಸಿದ ಔಷಧ ಸ್ಯಾಂಪಲ್‌ಗಳಲ್ಲಿ ಶೇಕಡಾ 3ರಷ್ಟು ಕಳಪೆ ಎಂದು ಪ್ರಯೋಗಾಲಯದ ವಿಶ್ಲೇಷಣೆಯಿಂದ ಗೊತ್ತಾಗಿದೆ.

(ಸೌ. "ಬಳಕೆದಾರರ ವೇದಿಕೆ" ಉಡುಪಿ)

ಹಾವನ್ನೇ ನುಂಗಿತು ಹಾವು

ಶೃಂಗೇರಿ ಬಳಿ ನಿಸರ್ಗದ ಅಪರೂಪ ಘಟನೆ

(ಸುದ್ದಿ: ಹೆಚ್.ಎಸ್. ಜಂಕ್ಕ)

ಗಂಡಗಟ್ಟೆ: ಹಾವುಗಳು ಒಂದರೊಡನೊಂದು ಎಣೆಯಾಡುತ್ತವೆ. ಇದು ತಕ್ಕಮಟ್ಟಿಗೆ ಸರ್ವೇ ಸಾಮಾನ್ಯ ಎನ್ನಬಹುದಾದ ಒಂದು ನಿಸರ್ಗದ ಘಟನೆ.

ಎರಡು ಹಾವುಗಳು ಹೋರಾಡಿ ಒಂದು ಇನ್ನೊಂದನ್ನು ನುಂಗುವುದೂ ಉಂಟು ಆದರೆ ಇದು ಅಪರೂಪ. ಇಂಥದೊಂದು ಅತೀ ಅಪರೂಪದ ನಿಸರ್ಗದೃಶ್ಯ ಇತ್ತೀಚೆಗೆ ಇಲ್ಲಿನವರಿಗೆ ದೊರೆಯಿತು.

ಸುಮಾರು ನಾಲ್ಕೂವರೆ ಅಡಿ ಉದ್ದ, ಅರ್ಧ ಅಡಿ ದಪ್ಪದ ಹಾವೊಂದು ಬೆಳಗಿನ ೧೧ ಗಂಟೆ ಹೊತ್ತಿಗೆ ಅಲ್ಲಿ ಇಲ್ಲಿ ಅಲೆಯುತ್ತಿತ್ತು. ಹಾಗೆಯೇ ಒಂದು ಹುತ್ತದ ಹತ್ತಿರ ಹೋಯಿತು. ಆಗ ಆ ಹುತ್ತದಿಂದ ಇನ್ನೊಂದು ಹಾವು ಸರಕ್ಕನೆ ಹೊರಟು ಓಡಿತು. ಓಡಿ ಬಂದು ರಸ್ತೆಗೆ ಬಿತ್ತು. ಅಷ್ಟರಲ್ಲಿ ಹಿಂದಿನಿಂದ ದೊಡ್ಡ ಹಾವು ಅದನ್ನು ಬೆರಸಿಕೊಂಡು ಬಂದು ಅದರ ಕುತ್ತಿಗೆಗೆ ಸರಿಯಾಗಿ ಕಚ್ಚಿ ಹಿಡಿಯಿತು.

ಹೀಗೆ ಸುಮಾರು ೪ ಘಂಟೆಗಳ ಕಾಲ ಕಚ್ಚಿ ಹಿಡಿದುಕೊಂಡಿತ್ತು. ಕೊನೆಗೆ ಸಣ್ಣ ಹಾವು ಸತ್ತುಹೋಯಿತು. ಅದನ್ನು ಅರ್ಧದವರೆಗೆ ನುಂಗಿದ ದೊಡ್ಡ ಹಾವು ಪುನಃ ಹೊರಕ್ಕೆ ಹಾಕಿತು. ಅದರಲ್ಲಿದ್ದ ಅರಶಿಣ ಬಣ್ಣದ ಎಣ್ಣೆಯಂತಹ ನೀರನ್ನು ಎರಡು ಚಮಚದಷ್ಟು ಬಾಯಿಂದ ಹಿಂದಕ್ಕೆ ಹಾರಿಸಿತು. ಹಾವನ್ನು ಅಲ್ಲೇ ಬಿಟ್ಟು ಸ್ವಲ್ಪ ದೂರ ಹೋಗಿ, ಪುನಃ ಹಿಂದೆ ಬಂದು ಅದನ್ನು ಇಡೀ ನುಂಗಿತು.

ಈ ಅಪರೂಪದ ದೃಶ್ಯವನ್ನು ಸುಮಾರು ೨೫ ಜನ ಹಳ್ಳಿಗರು ಮೂಕರಾಗಿ ನಿಂತು ನೋಡಿದರು.

ಈ ಎರಡೂ ನಾಗರಹಾವುಗಳಾಗಿದ್ದು, ಒಂದು "೪ ಫಳಿಗೆಯದು" ಮತ್ತೊಂದು "ಒಂದೂವರೆ ಫಳಿಗೆಯದು" ಎಂದು ಹಳ್ಳಿಗರು ಊಹಿಸಿದ್ದಾರೆ.

ಸಣ್ಣ ಹಾವನ್ನು ನುಂಗಿ ಆದ ಮೇಲೆ ದೊಡ್ಡ ಹಾವು ಸುಮಾರು ೭ ಅಡಿ ಎತ್ತರದ ದರೆಯೊಂದನ್ನು ಹತ್ತಿ ಹೊರಟು ಹೋಯಿತು. ಸಣ್ಣ ಹಾವಿದ್ದ ಹುತ್ತದೊಳಗೇ ಅದು ಸೇರಿರಬೇಕೆಂದು ಶಂಕಿಸಲಾಗಿದೆ.

ಓ ದು ಗ ರ ಪ ತ್ರ ಗ ಳು

ಮುಖ್ಯ ಮಂತ್ರಿಗಳ ಹೇಳಿಕೆ

ಖಾಲಿ ಆಶ್ವಾಸನೆಯಾಗದಿರಲಿ

'ದೀವಟಿಗೆ' ಸಂಪಾದಕರಿಗೆ

ದಿ. ೫-೫-೮೩ರಂದು ಮಾನ್ಯ ಮುಖ್ಯ ಮಂತ್ರಿಯವರು ದೇವಸ್ಥಾನದ (ಮುಜರಾಯಿ) ನೌಕರರ ಬಗ್ಗೆ ಸಹಾನುಭೂತಿ ಸೂಚಿಸಿ, ಪ್ರತಿಯೊಬ್ಬ ನೌಕರರಿಗೂ ಕನಿಷ್ಠ ೧೦೦ ರೂ. ಸಂಬಳ ಕೊಡಲು ವ್ಯವಸ್ಥೆ ಮಾಡುವುದಾಗಿಯೂ, ಮೇ ೧೯ರ ಚುನಾವಣೆಯ ನಂತರ ನಿರ್ಧಾರ ಕೈಗೊಳ್ಳುವುದಾಗಿಯೂ ತಿಳಿಸಿದ್ದು ಇದುವರೆಗೆ ಯಾವುದೇ ನಿರ್ಧಾರ ಕೈಗೊಂಡಿರುವುದು ನಮ್ಮಗಳ ಗಮನಕ್ಕೆ ಬಂದಿರುವುದಿಲ್ಲ. ಮೊದಲೇ "ಆಶ್ವಾಸನೆ ಮಂತ್ರಿ" ಗಳೆಂದು ಪ್ರಖ್ಯಾತರಾಗಿರುವ ಮುಖ್ಯ ಮಂತ್ರಿಯವರ ಆ ದಿನದ ಹೇಳಿಕೆ ಕೂಡ ಬರೀ ಒಂದು ಆಶ್ವಾಸನೆಯೆ ಎಂದು ನಮಗೆ ಅನುಮಾನವಾಗಿರುತ್ತದೆ. ಅಲ್ಲದೇ ಶೃಂಗೇರಿ ತಹಶೀಲ್ದಾರ್ ರವರು ಕಿಗ್ಗ ದೇವಸ್ಥಾನದ ಫಂಡ್‌ನಲ್ಲಿ ಒಂದು ಲಕ್ಷ ರೂ. ಇರುವುದಾಗಿಯೂ ಸದ್ಯದಲ್ಲೇ ಅದನ್ನು ಕೊಡುವುದಾಗಿಯೂ ಅದೇ ದಿನ ನಮಗೆ ತಿಳಿಸಿದ್ದರು. ಆದರೆ ಇಲ್ಲಿಯವರೆಗೆ ಆ ಹಣವು ಬಂದಿರುವುದಿಲ್ಲ. ಕೇಳಿದರೆ ಮೀಟಿಂಗ್ ಮಾಡಿ ಹಣ ಕೊಡುತ್ತೇವೆ ಎಂದು ಹೇಳುತ್ತಾರೆ. ಬಡ ನೌಕರರ ಬವಣೆಯನ್ನು ಬರೀ ಹೇಳುವುದರಲ್ಲೇ ಕಳೆಯದೆ ಬರಬೇಕಾದ ಹಣವನ್ನು ಜಾಗ್ರತೆ ಕೊಡಿಸಬೇಕಾಗಿ ಸರ್ಕಾರವನ್ನು ಮತ್ತು ತಹಶೀಲ್ದಾರ್ ರವರನ್ನು ವಿನಂತಿಸಿಕೊಳ್ಳುತ್ತೇವೆ.

ನೌಕರರ ಪರವಾಗಿ,

ಕೆ. ಸುಬ್ರಾಯ, ಕಿಗ್ಗ.

ಪೋಲೀಸರಿಗೆ ಅಭಿನಂದನೆ

ಸಂಪಾದಕರಿಗೆ,

ದಿ. ೨೩-೬-೮೩ ರ ದೀವಟಿಗೆಯಲ್ಲಿ ಯುವತಿಯರನ್ನು ಬೊಂಬಾಯಿಗೆ ಸಾಗಿಸುವ ಬಗ್ಗೆ ಓದಿ ಬೇಸರವಾಯ್ತು. ಬಡತನ ತಾಳಲಾರದೆ ಬೊಂಬಾಯಿಗೆ ಹೋಗುವುದಂತೂ ಸುಳ್ಳು. ಇಂದು ಕಾಫಿ ಎಸ್ಟೇಟಿನಲ್ಲಿ ದುಡಿದು ಶೀಲವಂತರಾಗಿ (ನೆಮ್ಮದಿ) ಯಿಂದ ಇರುವ ಯುವತಿಯರೂ ಇದ್ದಾರೆ. ಬಣ್ಣದ ಮಾತಿಗೆ ಮರುಳಾಗಿ, ತಾವು ಶ್ರೀಮಂತರಾಗಬೇಕು, ಜರಿಸೀರೆ ಉಟ್ಟು ಮೈತುಂಬಾ ಒಡವೆ ಧರಿಸಬೇಕೆಂಬ ಅತಿಆಸೆಯಿಂದ ಇಂತಹ ಹೀನ ಮಾರ್ಗವನ್ನು ತುಳಿಯುವ ಹೆಂಗಸರೇ ಹೆಚ್ಚು. ಇದಕ್ಕೆ ದಳ್ಳಾಳಿಗಳು ಒಂದು ಕಾರಣವಾದರೆ, ತಂದೆ ತಾಯಿಗಳ ಪ್ರೋತ್ಸಾಹವೂ ಇರುವುದು ದುರದೃಷ್ಟಕರ. ಏನೇ ಆಗಲಿ ಮುಗ್ಧ ಮತ್ತು ಗಂಧದ ಕಳ್ಳಸಾಗಾಣಿಕೆಯನ್ನು ಯಶಸ್ವಿಯಾಗಿ ತಡೆದು, ಈಗ ಈ ಕಡೆ ಗಮನ ಹರಿಸಿ ಯಶಸ್ವಿಯಾದುದಕ್ಕೆ ಕೊಪ್ಪದ ಪೋಲಿಸ್ ಇಲಾಖೆಗೆ ಅದರಲ್ಲೂ ಸಬ್-ಇನ್ಸ್‌ಪೆಕ್ಟರ್ ರವರಿಗೆ ಅಭಿನಂದನೆಗಳು

-ಒಬ್ಬ ನಾಗರೀಕ, ಕೊಪ್ಪ.

"ಹುರುಳಿಲ್ಲದ ಬೇಡಿಕೆ"

ಮಾನ್ಯರೇ,

ಬೇಗಾನೆ ರಾಮಯ್ಯನವರು "ಈ ೩೦ ವರ್ಷಗಳಲ್ಲಿ ಕ್ಷೇತ್ರದಲ್ಲಿ ಆಗಿರದ ಸಾಧನೆಗಳನ್ನು ನಾನು ಮಾಡಿದ್ದೇನೆ" ಎಂಬುದಾಗಿ ಹೋದಲೆಲ್ಲಾ ಹೆಮ್ಮೆಯಿಂದ ಹೇಳಿಕೊಳ್ಳುತ್ತಿದ್ದಾರೆ. ಹಾಗಿರುವಾಗ "ನಳಿನಿ ನದಿಗೆ ಸೇತುವೆ ಬೇಕೆಂಬ ಬೇಡಿಕೆ ರಜತ ಮಹೋತ್ಸವ ಆಚರಿಸಿದಂತಾಯಿತೆಂದು" ಹಂದಿಗದ್ದೆ ಮ. ಯೋಗೀಶ್ ರವರು [೨೭-೬-೮೩ "ದೀವಟಿಗೆ"ಯಲ್ಲಿ] ದೂರಿರುವುದು ಸುಮ್ಮನೆ ನಮ್ಮ ಬಡವರ ಬಂಧು ರಾಮಯ್ಯನವರಿಗೆ ಅಥವಾ ನಮ್ಮ ಆಳುವ ಸರ್ಕಾರದ ಸಾಧನೆಗೆ ಮಸಿ ಬಳಿಯುವ ಪ್ರಯತ್ನ ಎಂದು ನನಗೆ ಅನ್ನಿಸುತ್ತದೆ. ಏಕೆಂದರೆ ಕಿಗ್ಗ-ಸಿರಿಮನೆ ಮಾರ್ಗದಲ್ಲಿ ರಾಮಯ್ಯನವರ ಅಥವಾ ಗುಂಡೂರಾಯರ ಅಥವಾ ಅವರ ಅನುಯಾಯಿಗಳ ಕಾರು ಅಥವಾ ಅವರ ಮಕ್ಕಳು ಸುತ್ತಬೇಕಾದ ಪ್ರಮೇಯವಿಲ್ಲ. ಮುಂದೆ ಬರುವುದೂ ಇಲ್ಲ. ಆದ್ದರಿಂದ ಇನ್ನು ಮುಂದಾದರೂ ಗ್ರಾಮಸ್ಥರು ಇಂಥ ಹುರುಳಿಲ್ಲದ ಬೇಡಿಕೆಗಳನ್ನು ಮಂಡಿಸಬಾರದೆಂದು ವಿನಂತಿಸುತ್ತೇನೆ.

-ಕೆ. ಎಲ್. ಗಣೇಶ, ಕಿಗ್ಗ.

ಕೊಪ್ಪ ಸರ್ಕಲ್ಲಿನಲ್ಲಿ 'ಕೈ ಮರ' ಬೇಕು.

ಮಾನ್ಯರೆ,

ಹೊಸತಾಗಿ ಊರಿಗೆ ಬರುವ ವಾಹನ ಚಾಲಕರಿಗೆ ಸರ್ಕಲ್ ಇರುವ ಕಡೆ ಸರಿಯಾದ ಕೈಮರಗಳಿಲ್ಲದಿದ್ದರೆ ತೊಂದರೆಯಾಗುವುದು ಸಹಜ. ಅದೇ ರೀತಿ ಕೊಪ್ಪದ ಬಾಳಗಡಿ ಸರ್ಕಲ್‌ನಲ್ಲಿಯೂ ಈ ತೊಂದರೆ ತಪ್ಪಿಲ್ಲ. ಇಲ್ಲಿ ಯಾವುದೇ ಊರಿಗೆ ಹೋಗಲೂ ಊರಿನ ಹೆಸರು, ಇರುವ ದೂರ ಮತ್ತು ರಸ್ತೆಯನ್ನು ತೋರಿಸಲು ಬಾಣದ ಗುರುತು ಇಲ್ಲ. ಆದ್ದರಿಂದ ಹೊಸತಾಗಿ ಬಂದ ವಾಹನ ಚಾಲಕರಿಗೆ-ಅದರಲ್ಲೂ ಶೃಂಗೇರಿ, ಚಿಕ್ಕಮಗಳೂರು, ತೀರ್ಥಹಳ್ಳಿ, ಆಗುಂಬೆ ಕಡೆ ಹೋಗುವ ಪ್ರವಾಸಿ ವಾಹನ ಚಾಲಕರಿಗೆ ತುಂಬಾ ತೊಂದರೆಯಾಗುತ್ತದೆ. ಸಂಬಂಧಪಟ್ಟವರು ಈ ಕೊರತೆ ನಿವಾರಿಸಲಿ.

-ಟಿ. ಜಯರಾಂ, ಕೊಪ್ಪ.

ನೀಲಕಂಠಭಟ್ಟರ ಸ್ಪಷ್ಟೀಕರಣ

ಮಾನ್ಯರೇ,

ನಾನು ತಮ್ಮ ೨೭-೫-೮೩ ರ ಪತ್ರಿಕೆಯಲ್ಲಿ 'ಆರೋಪನಿರಾಧಾರ' ಎಂಬ ಹೇಳಿಕೆ ಕೊಟ್ಟಿದ್ದರ ಬಗ್ಗೆ ತಾ. ೨೭-೬-೮೩ ರ ಪತ್ರಿಕೆಯಲ್ಲಿ ಶ್ರೀ ಯು. ವಿ. ಆರ್. ಭಟ್ಟರು "ಭಟ್ಟರ ಹೇಳಿಕೆ ಸತ್ಯ ದೂರ" ಎಂಬ ಅಭಿಪ್ರಾಯ ಸೂಚಿಸಿರುವುದನ್ನು ಪ್ರಕಟಿಸಿರುವುದು ಸರಿಯಷ್ಟೆ. ನನ್ನ ಹೇಳಿಕೆಯಲ್ಲಿ ಹೀಗಿತ್ತು:- ಅಧ್ಯಕ್ಷರು, ನಿರ್ದೇಶಕರ ಮಂಡಳಿಯಲ್ಲಿ ಚರ್ಚಿಸಿ ಒಪ್ಪಿಗೆ ಪಡೆಯದೇ ಪತ್ರಿಕಾ ಹೇಳಿಕೆಯೊಂದನ್ನು (ಅಧ್ಯಕ್ಷರ ಸೀಲಿನೊಂದಿಗೆ) ಕೊಟ್ಟಿದ್ದನ್ನು ಪ್ರಶ್ನಿಸಿದ ೬ ಜನ ನಿರ್ದೇಶಕರಿಗೆ, ಅಧ್ಯಕ್ಷರು ನೋಟೀಸು ಜಾರಿಮಾಡಿದರು" ಎಂಬುದಾಗಿ ಪ್ರಕಟವಾಗಿದೆ.

ಈ ಬಗ್ಗೆ ಶ್ರೀ ಯು. ವಿ. ಆರ್. ಭಟ್ಟರು ಶೃಂಕೊಸ ಪತ್ರಿಕೆಯ ಸಂಪಾದಕರಿಗೆ ಬರೆದು ಅದರ ನಕಲನ್ನು ಹರಿಹರಪುರ ಶ್ರೀಮಠದ ಶ್ರೀ ಸ್ವಾಮೀಜಿಯವರಿಗೆ ಕಳುಹಿಸಿರುವುದರ ಯಥಾಪ್ರತಿಯನ್ನು ತಮ್ಮ ಅವಗಾಹನೆಗೆ ಮಾತ್ರ (ಪ್ರಕಟಿಸುವುದು ಬೇಡ) ಕಳುಹಿಸಿರುತ್ತೇನೆ. ಶೃಂಕೊಸ ಸಂಪಾದಕರಿಗೆ ಬರೆದ ಹೇಳಿಕೆಯಲ್ಲಿ ಅದನ್ನು ಪ್ರಕಟಪಡಿಸಲು ಕೇಳಿಕೊಂಡಿರುತ್ತಾರೆ. ಮತ್ತು ಹೇಳಿಕೆಯ ಕೆಳಗಡೆ ಡಾ|| ಯು.ವಿ. ಆರ್.ಭಟ್ಟ ಅಧ್ಯಕ್ಷರು ಮತ್ತು ಸಹಕಾರ ಸಂಘದ ಕಾರ್ಯದರ್ಶಿಗಳ ಪರವಾಗಿ" ಎಂಬುದಾಗಿ ಬರೆದಿರುತ್ತಾರೆ ವಿ. ಎಸ್. ಎಸ್. ಎನ್. ಅಧ್ಯಕ್ಷರ ಶೀಲು ಹಾಕಿಯೇ ನಿರ್ದೇಶಕರಿಗೆ ನೋಟೀಸ್ ಕೊಟ್ಟಿರುತ್ತಾರೆ ಪತ್ರಿಕೆ ಸಂಪಾದಕರಿಗೆ ಬರೆದ ಹೇಳಿಕೆ ಅಥವಾ

(ಆನೇ ಪುಟಕ್ಕೆ)

ಎಲ್ಲರೂ ಬೊಂಬಾಯಿ ಸಂಪರ್ಕವಿರುವವರೇ?

ಸ್ವಾಮಿ,

ಅವಾಗಿ ತಮ್ಮ ಪತ್ರಿಕೆಯ ದಿನಾಂಕ ೨೭-೬-೮೩ ರ ಪ್ರತಿಯಲ್ಲಿ ಅಚ್ಚಾಗಿರುವ "ಕಿರು ಬೊಂಬಾಯಿ" ಎಂಬುದು ನಮಗೆ ತುಂಬಾ ನೋವನ್ನು ಉಂಟು ಮಾಡಿದೆ. ಧರ್ಮ ಕರ್ಮಗಳನ್ನು ಅನುಸರಿಸಿ ಗೌರವದಿಂದ ಬದುಕುತ್ತಿರುವ ನಮ್ಮಗಳಿಗೆ "ಕಿರು ಬೊಂಬಾಯಿ" ವಾಸಿಗಳೆಂದು ಪ್ರಚಾರ ಮಾಡಿರುವುದು ಸರಿಯೇ? ಅಥವಾ ಮಾವಿನ ಕಟ್ಟೆಯ ಗೆಳತಿಯವರ ಬತ್ತಳಿಕೆಯಲ್ಲಿ ಕಾಲ, ವಸ್ತು ಸನ್ನಿವೇಶಗಳಿಗೆ ಸರಿಯಾಗಿ ಬಳಸತಕ್ಕ ಪದಗಳಿಲ್ಲವೆ? ಒಂದು ಊರಿನಲ್ಲಿ ಒಬ್ಬರು ಅಥವಾ ಇಬ್ಬರು ಬೊಂಬಾಯಿಗೆ ಹೋದರೆ ಆ ಊರಿನವರೆಲ್ಲರೂ ಬೊಂಬಾಯಿಗೆ ಹೋದಂತೆಯೆ? ಬಸ್ಸಿನಲ್ಲಿ ಪ್ರಯಾಣ ಮಾಡುವಾಗ ಒಬ್ಬರು ಅಥವಾ ಇಬ್ಬರು ಹೀನ ವೃತ್ತಿಯವರಿದ್ದರೆ ಆ ಬಸ್ಸಿನಲ್ಲಿ ಇದ್ದವರೆಲ್ಲರೂ ಹೀನರೆ? ಬೇಗಾನೆ ಕೈಮರದಲ್ಲಿ ಮನೆಗಳು ಎಷ್ಟಿವೆ? ಪತ್ರಿಕೆಯಲ್ಲಿ ಬಂದ ಪತ್ರದ ಪ್ರಕಾರ ಮನೆಯೊಬ್ಬ ವಿಷ್ಟೆಟರುಗಳೆಂದು ಕಾಣುತ್ತೆ. ಆ ರೂಪದಲ್ಲಿ ಆ ಪ್ರಮಾಣದಲ್ಲಿ ಇದ್ದಾರೆಯೇ? ಈ ಬೇಗಾನೆ ಕೈ ಮರದಲ್ಲಿ ವಾಸಿಸುವವರೆಲ್ಲಾ ಬಡವಾಯಿಗಳು. ಆದ್ದರಿಂದ ಏನು ಬೇಕಾದರೂ ಏನು ಬರೆದರೂ ಸರಿ ಎಂದೇ? ಇದರಿಂದಾಗಿ ಈ ಸ್ಥಳಕ್ಕೆ ಬರುವ ಪ್ರಯಾಣಿಕರ ಮತ್ತು ಬೀಡಿ ಕಾರ್ಮಿಕರ ಮೇಲೂ ಧರಿಸು ಮಾಡಿದೆ ಹಾಗೂ ಈ ಊರಿನಲ್ಲಿ ಹುಟ್ಟಿದ ಜನರ ಹೆಸರಾದರೂ ತಿಳಿಸುವಿರಾಗಿ ಕೇಳಿಕೊಳ್ಳುತ್ತೇವೆ.

-ಉಳಿದು ನೊಂದ ಬೇಗಾನೆ ಕೈ ಮರ ವಾಸಿಗಳು

(ಮೂವರ ಸಹಿ ಇದೆ)

ಶೃಂಗೇರಿ ಧನ್ವಂತರಿ ಆಸ್ಪತ್ರೆಯ ಪಕ್ಕದ ಕಲ್ಲುಬಂಡೆಯಲ್ಲಿ ಕಲ್ಲು ಒಡೆಯುವುದಕ್ಕೆ ನಿಷೇಧ

ಶೃಂಗೇರಿ: ಇಲ್ಲಿನ ಧನ್ವಂತರಿ ಆಸ್ಪತ್ರೆಯ ಪಕ್ಕದಲ್ಲಿರುವ (ಸ. ನಂ. ೧೬೭ ರಲ್ಲಿರುವ) ಕಲ್ಲುಬಂಡೆಯಿಂದ ಕಲ್ಲು ಒಡೆಯುವುದನ್ನು ನಿಷೇಧಿಸಿ ತಹಸೀಲ್ದಾರ್ (ತಾಲೂಕು ಕಾರ್ಯಪಾಲ ದಂಡಾಧಿಕಾರಿ) ಜಿ. ಅನಂತರಾವ್ ಅವರು ಜು. ೭ರಂದು ಆಜ್ಞೆ ಮಾಡಿದ್ದಾರೆ.

ಈಗಾಗಲೇ ಒಡೆದಿರುವ ಕಲ್ಲನ್ನು ಸಾಗಿಸಲು ಒಡೆದವರಿಗೆ ೧೫ ದಿನಗಳ ಕಾಲಾವಕಾಶ ಕೊಟ್ಟಿದ್ದಾರೆ.

ಈ ರೀತಿ ಕಲ್ಲು ತೆಗೆದಲ್ಲಿ ಮಣ್ಣು ಕುಸಿತದಿಂದ ಗುಡ್ಡದ ಮೇಲಿರುವ ಆಸ್ಪತ್ರೆಗೆ ಅಪಾಯವಿದೆಯೆಂದೂ, ಕಲ್ಲು ಒಡೆಯಲು ಬಳಸುವ ಡೈನಾಮೈಟ್, ಜಿಂಕ ಮುಂತಾದವುಗಳಿಂದ ಆಸ್ಪತ್ರೆಯ ವಾತಾವರಣ ಕೆಡುವುದಲ್ಲದೆ ರೋಗಿಗಳಿಗೆ ಮಾನಸಿಕ ಹಿಂಸೆಯಾಗುವುದೆಂದೂ ಆಸ್ಪತ್ರೆಯ ಆಡಳಿತ ವರ್ಗ ನೀಡಿದ್ದ ದೂರನ್ನು ಆಜ್ಞೆಯಲ್ಲಿ ಉಲ್ಲೇಖಿಸಲಾಗಿದೆ.

ಅಂಚೆ ಬಟವಾಡೆ ಅಸ್ತವ್ಯಸ್ತ

(ಎರಡನೇ ಪುಟದಿಂದ)

ಸ್ಪೆಷಲ್ ಸರ್ವೀಸ್ ಇರುವುದು ಇನ್ನಷ್ಟು ತೊಂದರೆಯ ಅಂಶವಾಗಿದೆ.

[ಈ ಬಸ್ಸಿನ ನಿಲುಗಡೆಯಿಂದ ದಿನಪತ್ರಿಕೆಗಳೂ ಸಹ ವಿಪರೀತ ತಡವಾಗುತ್ತಿವೆ. ಬೆಳಿಗ್ಗೆ ೯-೧೦ಕ್ಕೇ ಬರುತ್ತಿದ್ದ ಪತ್ರಿಕೆಗಳು ಈಗ ಹಂಚಿಕೆಯಾಗುವುದು ೧೧ ಗಂಟೆಯ ನಂತರವೇ.]

ಈ ಎಲ್ಲಿ ವ್ಯವಸ್ಥೆ ತಾತ್ಕಾಲಿಕ ಎಂದು ಹೇಳಲಾಗಿದ್ದರೂ ಎಷ್ಟು "ತಾತ್ಕಾಲಿಕ" ಎಂಬುದು ಹೇಳಲು ಬರುವಂತಿಲ್ಲವಾದ್ದರಿಂದ ತಿಂಗಳುಗಟ್ಟಲೆ ಇದೇ ಪಾಡನ್ನೇ ಅನುಭವಿಸಬೇಕಾದೀತೆಂಬ ಆತಂಕ ಜನರಲ್ಲಿ ಮೂಡಿರುವುದು ಸ್ಪಷ್ಟವಾಗಿದೆ. ಆದ್ದರಿಂದ ಬೀರೂರು ಆರ್. ಎಂ. ಎಸ್ ನಿಂದ ಅಂಚೆ ಚೀಲಗಳು ಮೊದಲಿನಂತೆಯೇ ಬರುವಂತೆ ಮಾಡುವುದರ ಬಗ್ಗೆ ಅಂಚೆ ಇಲಾಖೆಯ ಮೇಲಧಿಕಾರಿಗಳು ಗಮನಹರಿಸಬೇಕೆಂದು ಜನ ನಿರೀಕ್ಷಿಸುತ್ತಿದ್ದಾರೆ.

ಬಸ್ಸನ್ನು ಮೊದಲಿನಂತೆಯೇ ಓಡಿಸಲು ಸಾಧ್ಯವಿಲ್ಲವಾದರೆ ಬೀರೂರು – ಶೃಂಗೇರಿ ಬಸ್ಸಿನದೇ ವೇಳೆಯನ್ನಾದರೂ ಮರು ಹೊಂದಾಣಿಕೆ ಮಾಡುವುದಾಗಲೀ ಅಥವಾ ಇನ್ನಾವುದೇ ರೀತಿಯಲ್ಲಿ ಅಂಚೆಯ ಸಕಾಲಿಕ ಬಟವಾಡೆ–ರವಾನೆಗೆ ಅನುಕೂಲವನ್ನು ಸಂಬಂಧಪಟ್ಟವರು ಕಲ್ಪಿಸುತ್ತಾರೆಂದೂ ನಿರೀಕ್ಷಿಸಲಾಗುತ್ತಿದೆ.

ಮಲೆನಾಡು ಸುಧಾರಣೆ ಮಂಡಳಿ ರಚನೆಗೆ ನಿರ್ಣಯ ಮಂಡನೆ

ಬೆಂಗಳೂರು: ಅತ್ಯಂತ ಹಿಂದುಳಿದಿರುವ ಹಾಗೂ ವಿಶೇಷ ಪರಿಸ್ಥಿತಿ ಇರುವ ಮಲೆನಾಡು ಪ್ರದೇಶದ ಸುಧಾರಣೆಗೆ ಮಂಡಳಿಯೊಂದನ್ನು ರಚಿಸಬೇಕೆಂದು ಕಾಂಗ್ರೆಸ್ ಸದಸ್ಯ ಶೀರ್ನಾಳಿ ಚಂದ್ರಶೇಖರ್ ಜುಲೈ ೩ ರಂದು ವಿಧಾನ ಸಭೆಯಲ್ಲಿ ಖಾಸಗಿ ನಿರ್ಣಯವೊಂದನ್ನು ಮಂಡಿಸಿದ್ದಾರೆ.

ಕೊಪ್ಪ ವಿದ್ಯಾರ್ಥಿ ಚಳುವಳಿ

(೧ ನೇ ಪುಟದಿಂದ)

ತಮ್ಮ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ವಿದ್ಯಾರ್ಥಿಗಳು ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು, ಮಂತ್ರಿಗಳು, ಹಿರಿಯ ಅಧಿಕಾರಿಗಳು-ಎಲ್ಲರಿಗೂ ಬರೆದಿದ್ದು, ಅವುಗಳ ಈಡೇರಿಕೆಗೆ ಜುಲೈ ೨೫ ರ ಗಡುವು ನೀಡಿದ್ದಾರೆ. (ಅದರಲ್ಲಿ ಪ್ರಾಂಶುಪಾಲರ ಸಮಸ್ಯೆಗಳೂ ಸೇರಿವೆ.) ಅನಂತರವೂ ಈಡೇರದಿದ್ದರೆ ಚಳುವಳಿಗೆ ಇಳಿಯಲು ನಿರ್ಧರಿಸಿದ್ದು ಇದಕ್ಕಾಗಿ ಕ್ರಿಯಾಸಮಿತಿಯೊಂದನ್ನೂ ರಚಿಸಿಕೊಂಡಿದ್ದಾರೆ.

"ಕಾಲೇಜು ಶುರುವಾದೊಡನೆ ವಿದ್ಯಾರ್ಥಿಗಳು ಚಳುವಳಿಗೆ ಇಳಿದಿದ್ದಾರೆ" ಎಂಬ ತಾತ್ಸಾರ ಭಾವ ತಾಳದೆ, ವಿದ್ಯಾರ್ಥಿಗಳ ಭವಿಷ್ಯ ಕತ್ತಲಾಗುವುದನ್ನು ತಪ್ಪಿಸಲು ಪ್ರಯತ್ನಿಸಬೇಕೆಂದು ಮುಖಂಡರಿಗೂ, ಪೋಷಕ ವೃಂದಕ್ಕೂ ವಿದ್ಯಾರ್ಥಿಗಳು ಮನವಿ ಮಾಡಿದ್ದಾರೆ.

ವಾಣಿಜ್ಯ ಪರೀಕ್ಷೆ ಫಲಿತಾಂಶ

ಶೃಂಗೇರಿ

ಇಲ್ಲಿನ ಗಾಯತ್ರಿ ವಾಣಿಜ್ಯ ವಿದ್ಯಾಶಾಲೆಯಲ್ಲಿ ಎಲ್ಲ ವಿಭಾಗಗಳಿಂದ ಒಟ್ಟು ೧೧೧ ವಿದ್ಯಾರ್ಥಿಗಳು ಪರೀಕ್ಷೆ ಕಟ್ಟಿದ್ದು, ೬೦ ಜನ ತೇರ್ಗಡೆಯಾಗಿದ್ದಾರೆ. ಫಲಿತಾಂಶ ಶೇ. ೫೪.೧.

ಕೊಪ್ಪ

ಇಲ್ಲಿನ ವಾಣಿಜ್ಯ ವಿದ್ಯಾಶಾಲೆಯಲ್ಲಿ ಒಟ್ಟು ೮೪ ವಿದ್ಯಾರ್ಥಿಗಳ ಪೈಕಿ ೪೭ ಜನ ಪಾಸಾಗಿದ್ದು, ಶೇಕಡಾ ೫೫.೭ ಫಲಿತಾಂಶ ಬಂದಿದೆ.

ನರಸಿಂಹರಾಜ ಪುರ

ಪರೀಕ್ಷೆಗೆ ಕಟ್ಟಿದ್ದ ೫೩ ವಿದ್ಯಾರ್ಥಿಗಳ ಪೈಕಿ ೩೫ ಜನ ಉತ್ತೀರ್ಣರಾಗಿದ್ದು ಫಲಿತಾಂಶ ಶೇ. ೬೬.೩.

ಕನ್ನಡ ಭಾಷೋತ್ಸವ

ಬೇಗಾರು ಕೈಮರ: ಇಲ್ಲಿ ಜುಲೈ ೪ರಂದು ಸಂಜೆ ಕನ್ನಡ ಭಾಷೋತ್ಸವವನ್ನು ಏರ್ಪಡಿಸಲಾಗಿತ್ತು. ಈ ಸಭೆಯ ಅಧ್ಯಕ್ಷತೆಯನ್ನು ಬೇಗಾರು ಪಂಚಾಯ್ತಿ ಸದಸ್ಯ ನಾಗಯ್ಯನವರು ವಹಿಸಿದ್ದರು.

ಮಾಜಿ ಶ್ಯಾನುಭೋಗ ಕೆ. ಕೃಷ್ಣಮೂರ್ತಿ ರಾವ್ ಅವರು ಸ್ವಾಗತ ಭಾಷಣ ಮಾಡಿದರು. ಮುಖ್ಯ ಅತಿಥಿಯಾಗಿದ್ದ ಕೆ. ಎಸ್. ಚಂದ್ರಶೇಖರ್ ಅವರು ಮಾತನಾಡಿ, ಕನ್ನಡ ಮತ್ತು ಜಾತಿ ಐಕ್ಯತೆ ಬಗ್ಗೆ ಒತ್ತಿ ಹೇಳಿದರು. ಕೃಷ್ಣಶೆಟ್ಟಿ, ಹೆಚ್. ಮಲ್ಲಪ್ಪ, ಸಿದ್ದನಾಯ್ಕ, ಬಸ್ಯೇಗೌಡ, ಟಿ. ಎಮ್. ಚಂದ್ರಶೇಖರ್ ಇವರುಗಳು ಮಾತನಾಡಿ ಈ ವರ್ಷದ ಕನ್ನಡ ರಾಜ್ಯೋತ್ಸವವನ್ನು ಕನ್ನಡ ವಿಜಯೋತ್ಸವವನ್ನಾಗಿ ಆಚರಿಸಲು ಕರೆ ನೀಡಿದರು.

ಜಕ್ರಿ ಸಾಹೇಬ್ ಅವರು ವಂದನಾರ್ಪಣೆ ಸಲ್ಲಿಸಿ, ಸಿಹಿ ಹಂಚಿದರು.

(ವರದಿ: ಎಸ್. ಕೆ. ಶೃಂಗೇಶ್ವರ)

ಸಂಪಾದಕ, ಪ್ರಕಾಶಕ ಮತ್ತು ಮುದ್ರಕ:
ಸಿರಿಮನೆ ನಾಗರಾಜ್
ಅಚ್ಚು: ನೇಸರ ಮುದ್ರಣ, ಕೊಪ್ಪ

ನ. ರಾ. ಪುರ ಬಳಿ ಕಾಣೆಯಾದ ಮಹಿಳೆ ಇನ್ನೂ ಪತ್ತೆಯಾಗಿಲ್ಲ

ನ. ರಾ. ಪುರ: ಇಲ್ಲಿಗೆ ಸಮೀಪದ ದಿಡಗೆಯಿಂದ ಮೇ ೧೧ ರಿಂದ ಕಾಣೆಯಾಗಿರುವ ಜಯಮ್ಮ (೨೪) ಎಂಬ ಮಹಿಳೆ ಇನ್ನೂ ಪತ್ತೆಯಾಗಿಲ್ಲವೆಂದು ತಿಳಿದು ಬಂದಿದೆ.

ತೀರ್ಥಹಳ್ಳಿ ತಾಲೂಕಿನ ಕಲ್ಲಳ್ಳಿ ಎಂಬಲ್ಲಿಗೆ ಮದುವೆಯಾಗಿದ್ದ ಈಕೆ ೧ ವರ್ಷದಿಂದ ತಂದೆಯ ಮನೆಗೆ ಬಂದು ಇದ್ದಳು.

ಮೇ ೧೧ ರಂದು ಬೆಳಗಿನ ಜಾವ "ಕೊನೇ ಆಶೀರ್ವಾದ ಬೇಡಿ" ತಂದೆ ತಾಯಿಗಳಿಗೆ ಪತ್ರ ಬರೆದಿಟ್ಟು ಈಕೆ ಹೊರಟು ಹೋಗಿದ್ದಳು. ಕುಟುಂಬದವರ ಹಾಗೂ ಪೋಲೀಸರ ಪ್ರಯತ್ನಗಳಿಂದಲೂ ಅವಳ ಪತ್ತೆಯಾಗಿಲ್ಲವೆಂದು ಗೊತ್ತಾಗಿದೆ.

ಯೋಗಾಸನ ಶಿಬಿರದ ಮುಕ್ತಾಯ ಸಮಾರಂಭ

ಕೊಪ್ಪ: ಜುಲೈ ೪ ರಂದು ಸಂಜೆ ಕೊಪ್ಪದ ಮಹಿಳಾ ಸಮಾಜದಲ್ಲಿ ಕೊಪ್ಪ ಮಾತೃ ಮಂಡಳಿ ವತಿಯಿಂದ ನಡೆದ ಎರಡನೇ ಯೋಗಾಸನ ಶಿಬಿರದ ಮುಕ್ತಾಯ ಸಮಾರಂಭ ಹನುಮಂತರಾವ್ ರವರ ಅಧ್ಯಕ್ಷತೆಯಲ್ಲಿ ಜರುಗಿತು.

ಪ್ರಾರಂಭದಲ್ಲಿ ಶಿಕ್ಷಾರ್ಥಿಗಳಿಂದ ಯೋಗಾಸನ ಪ್ರದರ್ಶನ ನಡೆಯಿತು. ನಂತರ ಆರೆಸ್ಸೆಸ್ ಪ್ರಚಾರಕರಾದ ಶ್ರೀಧರಮೂರ್ತಿ ಮಾತನಾಡಿ, ಯೋಗಾಸನ ಉಳಿದ ವ್ಯಾಯಾಮಗಳಂತೆ ಶರೀರಕ್ಕೆ ಮಾತ್ರವಲ್ಲದೆ ಮನಸ್ಸು ಮತ್ತು ಶರೀರಗಳನ್ನು ಸಂಸ್ಕಾರಗೊಳಿಸುವ ಸಾಧನವಾಗಿದೆಯೆಂದರು. ಶಿಬಿರದ ಶಿಕ್ಷಕಿ ಕು॥ ಭಾಗ್ಯರವರಿಂದ ವಿಶೇಷ ಯೋಗಾಸನ ಪ್ರದರ್ಶನ ನಡೆಯಿತು.

ಅಧ್ಯಕ್ಷರು ಮಾತನಾಡುತ್ತಾ ಇಂದಿನ ಪರಿಸ್ಥಿತಿಯಲ್ಲಿ ಯೋಗಾಸನದ ಅವಶ್ಯಕತೆಯನ್ನು ವಿವರಿಸಿದರು. ಶ್ರೀಮತಿ ರೋಹಿಣಿ ಭಟ್ ಸ್ವಾಗತಿಸಿದರು. ಶ್ರೀಮಾಶೆಟ್ಟಿ ವಂದಿಸಿದರು.

ಬೀಳ್ಕೊಡಿಗೆ ಸಮಾರಂಭ

ಕೊಪ್ಪ: ಜುಲೈ ೫ ರಂದು ಇಲ್ಲಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಇತ್ತೀಚೆಗೆ ವರ್ಗವಾದ ಜೀವಶಾಸ್ತ್ರ ಉಪನ್ಯಾಸಕ ಹೆಚ್. ಎಲ್. ದೇವರಾಜ್, ರಾಜ್ಯಶಾಸ್ತ್ರ ಉಪನ್ಯಾಸಕ ಎ. ರಾಮರಾವ್ ಮತ್ತು ಸಂಸ್ಕೃತ ಉಪನ್ಯಾಸಕ ಪ್ರಸನ್ನ ಕುಮಾರ್ ರವರುಗಳನ್ನು ಕಾಲೇಜಿನ ವಿದ್ಯಾರ್ಥಿಗಳು ಹಾರ್ದಿಕವಾಗಿ ಬೀಳ್ಕೊಟ್ಟರು.

ಪ್ರಾಂಶುಪಾಲರಾದ ಕೆ. ಎಸ್. ನಾರಾಯಣ ಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆದ ಈ ಸಭೆಯಲ್ಲಿ, ಕುಮಾರಿ ಹೆಚ್. ಎಸ್. ಸುಧಾ ಮತ್ತು ಕಂ. ಕ. ಕೃಷ್ಣಮೂರ್ತಿ ಉಪನ್ಯಾಸಕರು ಸಂಸ್ಥೆಗೆ ಸಲ್ಲಿಸಿದ ಸೇವೆಯನ್ನು ಸ್ಮರಿಸಿದರು. ಉಪನ್ಯಾಸಕರಿಗೆ ನೆನಪಿನ ಕಾಣಿಕೆಗಳನ್ನು ನೀಡಿ ಗೌರವಿಸಿದರು. ಕುಮಾರಿ ರೇಣುಕಾ ಮತ್ತು ರೇಖಾ ಹಾಡಿದರು. ಜಲಂಧರ್ ಸ್ವಾಗತಿಸಿದರು. ಕಂ. ಕ ಕೃಷ್ಣಮೂರ್ತಿ ವಂದಿಸಿದರು.

(ವರದಿ: ಶರ್ಮ)

ನೀಲಕಂಠಭಟ್ಟರ ಸ್ಪಷ್ಟೀಕರಣ

(ಮೂರನೇ ಪುಟದಿಂದ)

ರದ ಮೇಲೆ ಬರೆದಿರುತ್ತೇನೆ ಶ್ರೀ ಯು. ವಿ. ಆರ್. ಭಟ್ಟರ ಮೇಲೆ ಆಪಾದಿಸುವ ಅಭಿಪ್ರಾಯದಿಂದ ಬರೆದಿರುವುದಲ್ಲ. ಸುಳ್ಳು ಹೇಳಿಕೆ ನೀಡಿ ಯಾರಿಂದಲೂ ಮೆಚ್ಚಿಗೆ ಪಡೆಯುವ ಅವಶ್ಯಕತೆ ನನಗೆ ಇರುವುದಿಲ್ಲ.

ಹೇಳಿಕೆಗೆ ಪ್ರತಿ ಹೇಳಿಕೆ ನೀಡುವಾಗ, ಎಷ್ಟು ಎಚ್ಚರವಹಿಸಿದರೂ ಯಾರಿಗಾದರೂ ಮನಸ್ಸಿಗೆ ಬೇಸರವಾಗಬಹುದೆಂದು 'ದೀವಟಿಗೆ' ಪತ್ರಿಕೆ ಸಂಪಾದಕರಲ್ಲಿ ನಿವೇದಿಸಿಕೊಂಡಿದ್ದೆ. ನನ್ನ ಹೇಳಿಕೆಯಲ್ಲಿ ಯಾರಿಗಾದರೂ ನೋವಾಗುವಂತಹ ಸನ್ನಿವೇಶ ಉಂಟಾಗಿದ್ದರೆ ಮನ್ನಿಸಿರಿ. ಇದಕ್ಕಿಂತ ಹೆಚ್ಚಿಗೆ ಬರೆಯಬೇಕಾಗಿ ಕಾಣುತ್ತಿಲ್ಲ. ಎಲ್ಲರಿಗೂ ವಂದನೆಗಳು.

–ಜೆ. ಪಿ. ನೀಲಕಂಠ ಭಟ್ಟ,
ಹರಿಹರಪುರ.